# ಜಗದುದ್ಧಾರಕ ತನ್ನ ಮಗನೆಂದು ಬಗೆದು

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 04.
2. **Note:** This kruti is not available in other standard books that I referred.

ರಾಗ: ಶಂಕರಾಭರಣ ತಾಳ: ಆದಿ

ಜಗದುದ್ಧಾರಕ ತನ್ನ ಮಗನೆಂದು ಬಗೆದು
ನಿಗಮಗೋಚರನ ಆಡಿಸಿದಳು ಯಶೋದೆ ॥ ಪ ॥

ವಟದೆಲೆಯ ಮೇಲು ಸಂಪುಟದ ಮೇಲೊರಗಿ ಉಂ-
ಗುಟವ ಪೀರುವನ – ಆಡಿಸಿದಳು ॥ 1 ॥

ವಿಶ್ವತಶ್ಚಕ್ಷುವ ವಿಶ್ವತೋಮುಖನ
ವಿಶ್ವವ್ಯಾಪಕನ – ಆಡಿಸಿದಳು ॥ 2 ॥

ಅಣೋರಣಿಯನ ಮಹತೋಮಹೀಯನ
ಗಣನೆಯಿಲ್ಲದವನ – ಆಡಿಸಿದಳು ॥ 3 ॥

ನಿಗಮಕೆ ಸಿಲುಕದ ಅಗಣಿತ ಮಹಿಮನ
ಮಗುಗಳ ಮಾಣಿಕ್ಯನ – ಆಡಿಸಿದಳು ॥ 4 ॥

ಎಲ್ಲರೊಳು ಭರಿತನಾಗಿ ಇಪ್ಪ ಲಕುಮಿಯ
ವಲ್ಲಭ ಪುರಂದರ ವಿಠಲನ – ಆಡಿಸಿದಳು ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಗಣನೆಯಿಲ್ಲದನ** = ಎಣಿಕೆಗೆ ಸಿಕ್ಕದವನ, ಅಪ್ರಮೇಯನ

**Classification:** Keerthane

**Ankita:** purandara vittala

**Location:** NA

**Category:** Krishna Leele

**Sub-Category:** loka, Krishna, maga, yashode, ADu, aladele, aganita, koosu, Lakshmi,

**Pravachana:** NA

**Explanation:** NA